## 4. ರಾಜಮನೆತನದ ಸುಪರ್ದಿಗೆ ಅನಂತ ಪದ್ಮನಾಭ ದೇಗುಲ

ಮಹತ್ವದ ಬೆಳವಣಿಗೆಯೊಂದರಲ್ಲಿ ಸುಪ್ರೀಂಕೋರ್ಟ್, ತಿರುವನಂತಪುರದ ಅನಂತಪದ್ಮನಾಭ ದೇಗುಲದ ಆಡಳಿತಾಧಿಕಾರ ಹಾಗೂ ದೇಗುಲದ ಪೂಜಾ ಕೈಂಕರ್ಯ ಸೇವೆಗಳ ಹಕ್ಕುಗಳನ್ನು (ಶೆಬಾಯತ್ ಹಕ್ಕುಗಳು) ತಲೆತಲಾಂತರದಿಂದ ಆ ದೇಗುಲವನ್ನು ಮುನ್ನಡೆಸಿಕೊಂಡು ಬಂದಿರುವ ತಿರುವಾಂಕೂರು ರಾಜಮನೆತನಕ್ಕೇ ನೀಡಬೇಕೆಂದು ಆದೇಶ ನೀಡಿದೆ.

ಈ ಮೂಲಕ, ದೇಗುಲದ ಆಡಳಿತದಲ್ಲಿ ಹಾಗೂ ಆಸ್ತಿಪಾಸ್ತಿಯ ಮೇಲೆ ರಾಜಮನೆತನದವರ ಹಕ್ಕಿಲ್ಲ ಎಂದು 2011ರ ಜನವರಿ 31 ರಂದು ಕೇರಳ ಹೈಕೋರ್ಟ್ ನೀಡಿದ ತೀರ್ಪನ್ನು ಸುಪ್ರೀಂಕೋರ್ಟ್‌ನ ನ್ಯಾ.ಉದಯ್, ನ್ಯಾ. ಯು.ಲಲಿತ್ ಅವರುಳ್ಳ ನ್ಯಾಯಪೀಠ ರದ್ದುಗೊಳಿಸಿದೆ.

ದೇಗುಲದ ಮೇಲಿನ ಶೆಬಾಯತ್ ಹಕ್ಕುಗಳಿಗೆ ಸಂಬಂಧಿಸಿದಂತೆ ತಿರುವಾಂಕೂರು ಸಂಸ್ಥಾನದ ಕೊನೆಯ ಮಹಾರಾಜರು ಈ ಹಿಂದೆ ಭಾರತ ಸರ್ಕಾರದೊಂದಿಗೆ ಒಪ್ಪಂದ ಮಾಡಿಕೊಂಡಿದ್ದರು. ಆದರೆ, 1991ರಲ್ಲಿ ಮಹಾರಾಜರು ನಿಧನರಾಗಿದ್ದಾರೆ. ಹಾಗೆಂದ ಮಾತ್ರಕ್ಕೆ ಒಪ್ಪಂದ ರದ್ದಾಗಬೇಕು ಎಂದು ಹೇಳುವಂತಿಲ್ಲ. ಜೊತೆಗೆ, ಮಹಾರಾಜರ ನಿಧನದಿಂದ ದೇಗುಲದ ಆಸ್ತಿಪಾಸ್ತಿಯನ್ನು ಸರ್ಕಾರ ಸ್ವಾಧೀನಕ್ಕೆ ತೆಗೆದುಕೊಳ್ಳುವಂತಿಲ್ಲ.

ಹಿಂದಿನಿಂದ ನಡೆದು ಬಂದ ಮಾದರಿಯಲ್ಲೇ ದೇಗುಲದಲ್ಲಿ ಪೂಜೆ ಪುನಸ್ಕಾರ ನೆರವೇರಿಸಲು ರಾಜಮನೆತನದವರಿಗೆ ಹಕ್ಕು ಇರುತ್ತದೆ. ಆಡಳಿತ ಮಂಡಳಿಯಲ್ಲಿ ಸದಸ್ಯತ್ವವೂ ಇರುತ್ತದೆ ಹಾಗೂ ಆಡಳಿತಾತ್ಮಕ ವಿಚಾರದಲ್ಲಿ ರಾಜಮನೆತನದವರೂ ತಮ್ಮ ಅಭಿಪ್ರಾಯಗಳನ್ನು ಹೇಳಲು ಮುಕ್ತ ಸ್ವಾತಂತ್ರ್ಯವಿರುತ್ತದೆ. ದೇಗುಲದ ದಿನನಿತ್ಯದ ಕಾರ್ಯಕ್ರಮಗಳನ್ನು ರಾಜಮನೆತನವೇ ನೆರವೇರಿಸಬೇಕು ಎಂದು ಕೋರ್ಟ್ ತಿಳಿಸಿದೆ.

ಆಡಳಿತ ಮಂಡಳಿ ಬಗ್ಗೆ ಸೂಚನೆ: ದೇವಸ್ಥಾನದ ಆಡಳಿತ ಮಂಡಳಿಯ ಸದಸ್ಯರೆಲ್ಲರೂ ಹಿಂದೂಗಳೇ ಆಗಿರಬೇಕು ಹಾಗೂ ಆ ಸದಸ್ಯರೆಲ್ಲರೂ ದೇವಸ್ಥಾನದ ಕಟ್ಟಳೆಗಳಿಗೆ ಅನುಗುಣವಾಗಿ ನಡೆದುಕೊಳ್ಳಬೇಕಾಗುತ್ತದೆ ಎಂದು ಕೋರ್ಟ್ ಹೇಳಿದೆ. ಈವರೆಗೆ ದೇಗುಲದ ಆಡಳಿತಕ್ಕಾಗಿ ನೇಮಕಗೊಂಡಿದ್ದ ಮಧ್ಯಂತರ ಆಡಳಿತ ಮಂಡಳಿ ಹಾಗೆಯೇ ಮುಂದುವರಿಯಲಿ ಎಂದು ತಿಳಿಸಿದೆ. ತಿರುವನಂತಪುರದ ಜಿಲ್ಲಾ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರು ಈ ಮಂಡಳಿಯ ಮುಖ್ಯಸ್ಥರಾಗಿ ಮುಂದುವರಿಯಬೇಕು ಎಂದಿರುವ ಪೀಠ, ದೇಗುಲದ ಗರ್ಭಗುಡಿಯ ಕೆಳಗಿನ ಕೋಣೆಗಳಲ್ಲಿನ ವಾಲ್ಟ್–ಬಿ ಕೋಣೆಯನ್ನು ತೆರೆಯುವ ವಿಚಾರ ಆಡಳಿತ ಮಂಡಳಿಯೇ ನಿರ್ಧರಿಸಬೇಕು ಎಂದು ಸ್ಪಷ್ಟವಾಗಿ ತಿಳಿಸಿದೆ.

ಆಧಾರ:ಉದಯವಾಣಿ, ದಿನಾಂಕ:14.07.2020